ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ನಂ.17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ ಬೆಂಗಳೂರು 560 001.
ದೂ. 080-22028032/34/ಫ್ಯಾಕ್ಸ್ 22028041

ದಿನಾಂಕ : 05-03-2015

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಪತ್ರಿಕಾಗೋಷ್ಠಿ:<br>ಅಧ್ಯಕ್ಷರು,<br>ಡಾ. ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು. | 06-03-2015<br>ಶುಕ್ರವಾರ<br>ಅಪರಾಹ್ನ<br>12-00 ಗಂಟೆಗೆ | "ಭಾರತೀಯ ಆಡಳಿತ ಸೇವಾ ಅಧಿಕಾರಿಗಳ ಸಂಘ"<br>ಇನ್‌ಫೆಂಟ್ರಿ ರಸ್ತೆ<br>ಬೆಂಗಳೂರು – 560 001 |
| 2. | **National Integration Camp Valedictory Function.**<br>**Valedictory Address:**<br>**Shri K. Abhaya Chandra, Minister for Youth, Empowerment and Sports.**<br>**Note: Transport facilities from Press Club, Cubbon Park, Bengaluru at 02-15 PM.**<br>**Contact:**<br>**Dr. Ramakrishna Rao, Mob. No. 9986663132** | 06-03-2015<br>**Friday at 3-00 PM** | **Kuvempu Sabhagana, G.K.V.K. Bangalore – 560 065.** |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

## ಪರೀಕ್ಷಾ ಶುಲ್ಕ ಪಾವತಿ – ಅವಧಿ ವಿಸ್ತರಣೆ

ಬೆಂಗಳೂರು, ಮಾರ್ಚ್ 5 (ಕರ್ನಾಟಕ ವಾರ್ತೆ)

2015 ರ ಮಾರ್ಚ್ 30 ರಿಂದ ಏಪ್ರಿಲ್ 10 ರವರೆಗೆ ನಡೆಯಲಿರುವ ಕರ್ನಾಟಕ ಮುಕ್ತ ಶಾಲೆ – ಕೆ.ಓ.ಎಸ್. ಪರೀಕ್ಷೆಗೆ ಕರ್ನಾಟಕ ಮುಕ್ತ ಶಾಲೆ ಕೆ.ಓ.ಎಸ್. ಕಲಿಕಾ ಕೇಂದ್ರಗಳಿಗೆ ಪರೀಕ್ಷಾ ಶುಲ್ಕ ಪಾವತಿಸಲು ಕಡೆಯ ದಿನಾಂಕವನ್ನು ಮಾರ್ಚ್ 7 ರವರೆಗೆ ವಿಸ್ತರಿಸಲಾಗಿದೆ. ಮಾರ್ಚ್ 9 ರೊಳಗೆ ಆಯಾ ಕಲಿಕಾ ಕೇಂದ್ರದ ಸಮನ್ವಯಾಧಿಕಾರಿಗಳು ನಿಗಧಿತ ಶುಲ್ಕ ಪಾವತಿಸುವಂತೆ ನಿರ್ದೇಶಕರು (ಇತರೆ ಪರೀಕ್ಷೆಗಳು), ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ತಿಳಿಸಿದೆ.

ಬಾಬು:ಜಿಪಿಆರ್.

# LAST DATE EXTENDED

**Bangalore, March 5, (Karnataka Information)**

**Karnataka Open School - K.O.S. Examination Scheduled to be held from Date: 30-03-2014 to 10-04-2015. The dates for fees collection is extended to 07-03-2015. Students, Parents and Public are here by informed that examination fee will be payable on or before 07-03-2015 in respective concerned K.O.S. Study Centers. fee to be payable by concern KOS Coordinators on or before 09-03-2015. Statement given by Director (Othere Exams), Karnataka Secondary Education Examination Boards, Bangalore.**

**babu/gpr**

# ಲಿಫ್ಟ್ ತಯಾರಕರ ನೋಂದಣಿ ಕಡ್ಡಾಯ

**ಬೆಂಗಳೂರು, ಮಾರ್ಚ್ 5 (ಕರ್ನಾಟಕ ವಾರ್ತೆ)**

ಕರ್ನಾಟಕ ಸರ್ಕಾರವು ಕರ್ನಾಟಕ ಲಿಫ್ಟ್‌ಗಳ, ಎಕ್ಸ್‌ಲೇಟರ್‌ಗಳ ಮತ್ತು ಪ್ಯಾಸೆಂಜರ್ ಕನವೇಯರ್‌ಗಳ ನಿಯಮದಂತೆ ರಾಜ್ಯದ ಎಲ್ಲಾ ಲಿಫ್‌ಗಳ, ಎಕ್ಸ್‌ಲೇಟರ್‌ಗಳ ಮತ್ತು ಪ್ಯಾಸೆಂಜರ್ ಕನವೇಯರ್‌ಗಳ ತಯಾರಕರು, ಅಳವಡಿಕೆದಾರರು ಮತ್ತು ನಿಯತಕಾಲಿಕವಾಗಿ ಪರೀಕ್ಷಿಸಿ ನಿರ್ವಹಣೆಯಲ್ಲಿ ತೊಡಗಿರುವ ಎಲ್ಲಾ ವ್ಯಕ್ತಿಗಳು ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳುವಂತೆ ಮುಖ್ಯ ವಿದ್ಯುತ್ ಪರಿವೀಕ್ಷಕರು ತಿಳಿಸಿದ್ದಾರೆ.

ಹೆಚ್ಚಿನ ವಿವರಗಳನ್ನು ಅಂತರ್ಜಾಲ www.ksei,gov.in ದಲ್ಲಿ ಪಡೆಯಬಹುದು ಅಥವಾ ದೂರವಾಣಿ ಸಂಖ್ಯೆ 080 – 22341691 ಸಂಪರ್ಕಿಸಲು ಪ್ರಕಟಣೆ ಕೋರಿದೆ.

ಬಾಬು:ಜಿಪಿಆರ್.

# REGISTRATION OF LIFT MANUFACTURERS

**Bangalore, March 5, (Karnataka Information)**

**According to Chief Electrical Inspector to Government of Karnataka has enacted the Karnataka Lifts, Escalators & Pasenger Conveyors Act, 2012 and the Lifts, Escalators, Passenger Conveyors Rules 2015 and it has com into effect from 20-01-2015. Therefore, all manufacturers or makers or other persons engaged in erection, installation, periodical testing and maintenance of Lifts, Escalators and Passenger conveyors are hereby informed to obtain the registration as per Section 6 of the said Act as early as possible with the Chief Insepctor of Lifts, Escalators and Passenger Conceyors, Bangalore. For more information visit our website www.ksel.gov.in or this office on working days.**

**babu/gpr**

# ಸಕಾಲ ಯೋಜನೆಯಡಿ 7.07 ಕೋಟಿ ಅರ್ಜಿ ಇತ್ಯರ್ಥ

**– ಟಿ.ಬಿ. ಜಯಚಂದ್ರ**

ಬೆಂಗಳೂರು, ಮಾರ್ಚ್ 5 (ಕರ್ನಾಟಕ ವಾರ್ತೆ)

ಸಕಾಲ ಸೇವೆಯಡಿ ಈವರೆಗೆ ಏಳು ಕೋಟಿಗೂ ಹೆಚ್ಚಿನ ಅರ್ಜಿ ಸಲ್ಲಿಸಿದ ನಾಗರಿಕರಿಗೆ ನಿಗದಿತ ಸಮಯದಲ್ಲಿ ಸೇವೆಗಳನ್ನು ಒದಗಿಸಲಾಗಿದೆ ಎಂದು ಕಾನೂನು ಸಚಿವ ಶ್ರೀ. ಟಿ. ಬಿ. ಜಯಚಂದ್ರ ಅವರು ತಿಳಿಸಿದ್ದಾರೆ.

ವಿಕಾಸಸೌಧದಲ್ಲಿ ಇಂದು (ಸೆಪ್ಟೆಂಬರ್ ನಿಂದ ಡಿಸೆಂಬರ್‌ವರೆಗೆ) ನಾಲ್ಕು ತಿಂಗಳುಗಳ ಸಕಾಲ ಸೇವೆಗಳ ವರದಿ ಬಿಡುಗಡೆಮಾಡಿ ಮಾತನಾಡಿದ ಸಚಿವರು 2015 ರ ಮಾರ್ಚ್ ತಿಂಗಳ 4ನೇ ತಾರೀಖಿನವರೆಗೆ ಒಟ್ಟು 7,14,75,226 ಅರ್ಜಿಗಳನ್ನು ಸ್ವೀಕರಿಸಲಾಗಿದ್ದು, ಆ ಪೈಕಿ 7,07,14,531 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ ಎಂದರು.

ಸಕಾಲ ಯೋಜನೆಯಡಿ 50 ಇಲಾಖೆಗಳಲ್ಲಿನ 669 ಸೇವೆಗಳನ್ನು ಜನಸಾಮಾನ್ಯರಿಗೆ ಒದಗಿಸಲಾಗುತ್ತಿದೆ ಎಂದ ಸಚಿವ ಜಯಚಂದ್ರ ಅವರು ಸಕಾಲ ಮಿಷನ್‌ನಲ್ಲಿ ಅತೀ ಅವಶ್ಯವಿರುವ ನಾಗರಿಕ ಕೇಂದ್ರದ ಹೆಚ್ಚುವರಿ ಸೇವೆಗಳನ್ನು ಸೇರಿಸುವ ಪ್ರಕ್ರಿಯೆ ನಡೆಯುತ್ತಿದ್ದು, ಶೇ 100 ರಷ್ಟು ಗುರಿ ಸಾಧಿಸುವ ಪ್ರಯತ್ನ ನಡೆದಿದೆ ಎಂದು ತಿಳಿಸಿದರು.

ಸಕಾಲ ಯೋಜನೆಯಡಿ 135 ಸೇವೆಗಳನ್ನು ಆನ್‌ಲೈನ್ ಮೂಲಕ ಒದಗಿಸಲಾಗುತ್ತಿದೆ. ರಾಜ್ಯದ 30 ಜಿಲ್ಲೆಗಳ ಜಿಲ್ಲಾಧಿಕಾರಿಗಳ ಕಚೇರಿಗಳಲ್ಲಿ ಸಕಾಲ ಟಚ್ ಸ್ಕ್ರೀನ್ ಕಿಯೋಸ್ಕ್‌ಗಳನ್ನು ಅಳವಡಿಸಲಾಗಿದ್ದು, ಇದರಿಂದ ನಾಗರೀಕರು ಸಕಾಲ ಸೇವೆಗಳ ಕುರಿತು ಮಾಹಿತಿಗಳನ್ನು ಸುಲಭವಾಗಿ ಪಡೆದುಕೊಳ್ಳಬಹುದಾಗಿದೆ ಎಂದರು.

2014 ರ ಜುಲೈನಿಂದ ಡಿಸೆಂಬರ್‌ವರೆವಿ ಸರಾಸರಿ ಮಾಸಿಕ ಅರ್ಜಿ ಸ್ವೀಕೃತಿ ಹಾಗೂ ವಿಲೇವಾರಿಯು ಸುಮಾರು 24 ಲಕ್ಷದಷ್ಟು ಇದ್ದು 2014 ರ ಜನವರಿಯಿಂದ ಜೂನ್‌ವರೆಗೆ ಸರಾಸರಿ ಮಾಸಿಕ ಸ್ವೀಕೃತಿ 19 ಲಕ್ಷಕ್ಕೆ

ಹೋಲಿಸಿದರೆ ಉತ್ತಮ ಪ್ರಗತಿಯಾಗಿದೆ. ಇದು ಸಕಾಲ ಸೇವೆಗಳನ್ನು ಪಡೆದುಕೊಳ್ಳುವ ನಾಗರಿಕರ ಸಂಖ್ಯೆಯಲ್ಲಿ ಹೆಚ್ಚು ಪ್ರಗತಿಯಾಗಿರುವುದನ್ನು ಸೂಚಿಸುತ್ತದೆ ಎಂದು ಸಚಿವರು ತಿಳಿಸಿದರು.

ಚಿಕ್ಕಬಳ್ಳಾಪುರ ಜಿಲ್ಲೆಯು ಸಕಾಲ ಸೇವೆ ನೀಡುವಲ್ಲಿ ಕಳೆದ 11 ತಿಂಗಳಿನಿಂದ ಪ್ರಥಮ ಸ್ಥಾನವನ್ನು ಕಾಯ್ದುಕೊಂಡಿದ್ದು ಕಳೆದ ಏಳು ತಿಂಗಳಿನಿಂದ ತುಮಕೂರು ಜಿಲ್ಲೆಯು ದ್ವಿತೀಯ ಸ್ಥಾನವನ್ನು ಕಾದಿದೆ. 2014 ರ ಡಿಸೆಂಬರ್ ಅಂತ್ಯಕ್ಕೆ ಒಟ್ಟು 591 ಪ್ರಕರಣಗಳಲ್ಲಿ ನಾಗರಿಕರಿಗೆ ರೂ. 73,560 ಪರಿಹಾರ ಧನ ರೂಪದಲ್ಲಿ ಹಣ ಪಾವತಿ ಮಾಡಲಾಗಿದೆ ಎಂದು ಸಚಿವರು ಇದೇ ಸಂದರ್ಭದಲ್ಲಿ ತಿಳಿಸಿದರು.

ಬಾಬು:ಕೆಪಿಪಿ:ಜಿಪಿಆರ್.